**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕ: 18-07-2025**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್ ವಿ ಎ ವಕೀಲರಿಂದ,**

ನನ್ನ ತಂದೆಯ ಹೆಸರು ತಿಮ್ಮಪ್ಪ ಮಂಜಪ್ಪ ನಾಯ್ಕ ಇರುತ್ತದೆ. ನನ್ನ ತಂದೆಗೆ ಒಟ್ಟು ಒಂಬತ್ತು ಜನ ಮಕ್ಕಳು ಇರುತ್ತೇವೆ. ಅದರಲ್ಲಿ ನಾಲ್ಕು ಗಂಡು ಹಾಗೂ ಐದು ಹೆಣ್ಣು ಮಕ್ಕಳು ಇರುತ್ತೇವೆ. ಒಂದು ಗಂಡು ಮಗ ಚಿಕ್ಕವನಿದ್ದಾಗ ಮರಣ ಹೊಂದಿರುತ್ತಾರೆ. ನನ್ನ ತಾಯಿ ಆರೋಗ್ಯವಾಗಿರುವುದಿಲ್ಲ. ಅವರಿಗೆ ಹೃದಯ ಖಾಯಿಲೆ ಇದೆ. ನನ್ನ ನಾಲ್ಕು ಜನ ಸಹೋದರಿಯರಿಗೆ ಮದುವೆ ಆಗಿರುತ್ತದೆ. 6 ನೇ ವಾದಿ ಮೂಗಿಯಾಗಿರುತ್ತಾರೆ. ಅವಳಿಗೆ ಮದುವೆ ಆಗಿರುವುದಿಲ್ಲ. ನನ್ನ ಸಹೋದರಿಯರಲ್ಲಿ ಮೂರು ಜನ ಅಕ್ಕಂದಿರು ಮತ್ತು ಒಬ್ಬಳು ತಂಗಿ ಆಗುತ್ತಾಳೆ. ನಾಲ್ಕು ಜನ ಸಹೋದರಿಯರ ಮದುವೆ ನಮ್ಮ ತಂದೆ ಮರಣ ಹೊಂದಿದ ನಂತರ ಆಗಿರುತ್ತದೆ. ನಮ್ಮ ತಂದೆಯವರು ಸುಮಾರು 10 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ.

ನಮ್ಮ ಮನೆಯ ಆಸ್ತಿಯ ವ್ಯವಹಾರಗಳನ್ನು ನನ್ನ ಸಹೋದರಿಯರು ಮತ್ತು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು. ನಾನು ಮತ್ತು 8 ನೇ ವಾದಿ ದಾವಣಗೆರೆಯಲ್ಲಿ ಹೊಟೇಲ್ ಕೆಲಸ ಮಾಡಿಕೊಂಡು ವಾಸ ಮಾಡುತ್ತಿದ್ದೆವು. 7 ನೇ ವಾದಿಯವರು ಬೆಂಗಳೂರಿನಲ್ಲಿ ಹೊಟೇಲ್ ಕೆಲಸ ಮಾಡುತ್ತಿದ್ದಾರೆ. ನಾವು ಮೂರು ಜನ ನಮ್ಮ 10 ನೇ ವಯಸ್ಸಿನಲ್ಲಿ ಕೆಲಸಕ್ಕೆ ಹೋಗಿರುತ್ತೇವೆ. ನಾವು ಊರು ಬಿಟ್ಟು ಹೋಗವಾಗ ನಮ್ಮ ತಂದೆ ಜೀವಂತವಾಗಿದ್ದರು. ನಾನು 15 ವರ್ಷದವನಿದ್ದಾಗ ನನ್ನ ತಂದೆ ಮರಣ ಹೊಂದಿರುತ್ತಾರೆ. ನಾವು ಊರು ಬಿಟ್ಟು ಹೋದ ನಂತರ ಮನೆಯ ವ್ಯವಹಾರವನ್ನು ನಮ್ಮ ತಾಯಿ ಮತ್ತು ತಂದೆಯವರು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ತಂದೆ ಸಾರಾಯಿ ಕುಡಿಯುತ್ತಿದ್ದರು, ಎಲ್ಲ ವ್ಯವಹಾರವನ್ನು ನಮ್ಮ ತಾಯಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆ ಯಾವುದೇ ಖಾಯಿಲೆಯಿಂದ ಮರಣ ಹೊಂದಿರುವುದಿಲ್ಲ.

ನಾವು ಊರು ಬಿಟ್ಟು ಹೋದ ನಂತರ 3-4 ವರ್ಷಗಳಿಗೊಮ್ಮೆ ಊರಿಗೆ ಬರುತ್ತಿದ್ದೆವು. ಊರಿಗೆ ಬಂದು 2-3 ಮೂರು ದಿನ ಉಳಿದ ಮತ್ತೇ ವಾಪಸ್ಸು ಕೆಲಸಕ್ಕೆ ಹೋಗುತ್ತಿದ್ದೆವು. ನಾವು ಮೂರು ಜನ ನಮ್ಮ ದುಡಿಮೆಯ ಹಣವನ್ನು ನಮ್ಮ ತಂದೆ ತಾಯಿಗೆ ಕಳುಹಿಸುತ್ತಿರಲಿಲ್ಲ. ಮೂರು ವರ್ಷಕ್ಕೊಮ್ಮೆ ಬಂದಾಗ ಕೊಡುತ್ತಿದ್ದೆವು. ನಮ್ಮ ಆಸ್ತಿಯ ಸಾಗುವಳಿಯನ್ನು ನನ್ನ ತಾಯಿ ಮತ್ತು ಸಹೋದರಿಯರು ಮಾಡುತ್ತಿದ್ದರು. ನಾವು ಮನೆ ಬಿಟ್ಟು ಬೇರೆ ಊರಿಗೆ ಹೋದಾಗ ನಮ್ಮ

ಸಹೋದರಿಯವರಿಗೆ ಮದುವೆ ಆಗಿರಲಿಲ್ಲ. ನಮ್ಮಲ್ಲಿ 3 ನೇ ವಾದಿ ಹಿರಿಯ ಅಕ್ಕ ಆಗಿರುತ್ತಾರೆ. ನಮ್ಮ ನಾಲ್ಕು ಜನ ಅಕ್ಕಂದಿರನ್ನು, ಬೆಳಕೆ, ಸರ್ಪನಕಟ್ಟೆ , ಜಾಲಿ ಮತ್ತು ಕಾನಮದ್ರೆ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತೇವೆ. ಮೇಲೆ ಹೇಳಿದ ಗ್ರಾಮಗಳು ನಮ್ಮ ಮನೆಯಿಂದ ಐದು ಕಿಲೋಮೀಟರ್ ಒಳಗೆ ಇರುತ್ತವೆ.

ಸರ್ವೇ ನಂಬರ 303/4 ರ ದಾವಾ ಆಸ್ತಿಯಲ್ಲಿ ನಮ್ಮ ಮನೆ ಇರುತ್ತದೆ. ಆ ಮನೆಯನ್ನು ನಾವೆಲ್ಲರೂ ಸೇರಿಕೊಂಡು ಸುಮಾರು 20 ವರ್ಷಗಳ ಹಿಂದೆ ಕಟ್ಟಿರುತ್ತೇವೆ. ಅದು ಹಂಚಿನ ಮನೆ ಇರುತ್ತದೆ. ನಾವೆಲ್ಲರೂ ಮೇಲೆ ಹೇಳಿದ ಸರ್ವೇ ನಂಬರ 303/4 ರಲ್ಲಿರುವ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ. ನಮ್ಮ ತಂದೆಯವರು ಸಹ ಅದೇ ಮನೆಯಲ್ಲಿ ವಾಸ ಮಾಡುತ್ತಿದ್ದರು. ಸನ್ 2016 ರಲ್ಲಿ ದಾವಾಣಗೆರೆಯನ್ನು ಬಿಟ್ಟು ನಾನು ನಮ್ಮ ಊರಿಗೆ ಬಂದಿರುತ್ತೇನೆ. ಆದರೆ 7 ಮತ್ತು 8 ನೇ ವಾದಿಯವರು ಅಲ್ಲೇ ಕೆಲಸ ಮಾಡಿಕೊಂಡು ಇರುತ್ತಾರೆ. ನಾನು ಹುಟ್ಟಿ ಬೆಳೆದಿರುವುದು ಮೇಲೆ ಹೇಳಿದ ಮನೆಯಲ್ಲಿ ಎಂದರೆ ಸರಿ.

ದಾವಾ ಆಸ್ತಿಯ ಮೂಲ ಸರ್ವೇ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಎಲ್ಲಾ ಮಾಹಿತಿಯನ್ನು ಅಕ್ಟೊಬರ್ ತಿಂಗಳು 2016 ರಲ್ಲಿ ತಿಳಿದುಕೊಂಡಿರುತ್ತೇನೆ. ಸನ್ 2016 ರವರೆಗೆ ನಾನು ಊರಿಗೆ ಬಂದಾಗ ದಾವಾ ಆಸ್ತಿಯಲ್ಲಿ ಯಾವುದೇ ಮನೆಗಳು ಇರಲಿಲ್ಲ ಮತ್ತು ಬೇರೆಯವರು ಅಲ್ಲಿ ಸಾಗುವಳಿ ಮಾಡುತ್ತಿರಲಿಲ್ಲ. ದಾವಾ ಆಸ್ತಿಯಲ್ಲಿ ನಮ್ಮ ಮನೆಯನ್ನು ಹೊರತುಪಡಿಸಿ ಬೇರೆ ಯಾವುದೇ ಮನೆ ಇರುವುದಿಲ್ಲ. ದಾವಾ ಆಸ್ತಿಗಳಲ್ಲಿ ನಮ್ಮದು ಒಂದೇ ಮನೆ ಇರುತ್ತದೆ. ದಾವಾ ಆಸ್ತಿಗಳಲ್ಲಿ ತೆಂಗಿನ ಮರ, ಬಾವಿ ಮತ್ತು ಅಡಿಕೆ ಮರ ಇರುತ್ತವೆ.

ದಾವಾ ಆಸ್ತಿಯಲ್ಲಿ ಮನೆ ಕಟ್ಟುವಾಗ ಪಂಚಾಯತಿಯಿಂದ ಪರವಾನಿಗೆ ಪಡೆದುಕೊಂಡಿರುತ್ತೇವೆ. ನಮ್ಮ ತಾಯಿಗೆ ಸರಕಾರದಿಂದ ಮನೆ ಮಂಜೂರಿ ಆಗಿತ್ತು. ಆ ಬಗ್ಗೆ ನಮ್ಮ ಬಳಿ ಎಲ್ಲ ದಾಖಲಾತಿಗಳು ಇರುತ್ತವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶಕೋರಿದ್ದರಿಂದ ಮುಂದೂಡಲಾಯಿತು.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**